16. ಕಂಟ್ರಾಕ್ಟ್ದಾರನು ಖೈದಿಗಳ ಉಪಯೋಗಾರ್ಥ ತರಕಾವೀಗಳನ್ನು ದರ ಪಾನಿಗೆ 4 ಕಾಸುಗಳ ಮೇರಿಗೆ ಖಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಇನ್ಯಾವ ಸಂಗತಿಯನ್ನಾದರೂ ತಿಳಿಯಬೇಕಾದರೆ ಜೈಲ್ ಸೂಪರ್ಟಿಂಡೆಂಟರವರನ್ನು ಕೇಳಿ ತಿಳದುಕೊಳ್ಳಬಹುದು.

18. ಅಡಿಗೆ ಮಾಡುವಲ್ಲಿ ಮಡಿಕೆಗಳು ವಡಪು ಜೋಗುವದರಿಂದ ಆಹಾರವೇನಾದರೂ ಅಕಸ್ಮಾತ್ ನಷ್ಟವಾದರೆ ಅದರ ಲುಕ್ಸಾನನ್ನು ಕಂಟ್ರಾಕ್ಟ್ದಾರನೇ ಕಟ್ಟಿಕೊಡತಕ್ಕದ್ದು.

19. ಹಾಲೀ ಶಿವಮೊಗ್ಗಾ ಜೈಲಿನಲ್ಲಿ 225 ಮಂದಿ ಖೈದೀದ್ದಾರೆ, ಈ ಸಾಲಿನಲ್ಲಿ ಷುಮಾರ್ 250 ವರಿಗೆ ಜಾಸ್ತೀಯಾಗಬಹುದಾಗಿ ಅಂದಾಜು ಯಿರುತ್ತೆ.

20. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮುಕ್ತಮಿನ ಮೈಸೂರು ಗೆಜೆಟ್ಟಿನಿಂದಾಗಲಿ, ಶಿವಮೊಗ್ಗಾ ಜೈಲ್ ಸೂಪರ್ಟಿಂಡೆಂಟರವರನ್ನು ಕೇಳಿ ಆಗಲಿ ತಿಳದುಕೊಳ್ಳಬಹುದು.

ಬಿ. ವಂಚಿನಾಥರಾವ್,
ಜೈಲ್ ಸೂಪರ್ಟಿಂಡೆಂಟ್.

ನಗರ ಡಿವೀಜ್ಞ.

ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟ್ನಲ್ಲಿ.

1884ನೇ ಇಸವಿ ಅರ್ಜಿ ನಂಬರ 135.

ಮೃತಪಟ್ಟ ಮಲ್ಲಿಕಾರ್ಜ್ಜುನಪ್ಪನ ಆಸ್ತಿ ವಿಷಯದಲ್ಲಿ—

ಅರ್ಜಿದಾರ ಬೀರೂರು ಬಸಪ್ಪನ ಮಗ ಮಲ್ಲಪ್ಪ, ಮೃತಪಟ್ಟ ಸದರೀ ಮಲ್ಲಿಕಾರ್ಜ್ಜುನಪ್ಪನಿಗೆ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ಡಿಸ್ಟ್ರಿಕ್ಟ್ ಕಡೂರು ತಾಲ್ಲೂಕು ಬೀರೂರು ಸ್ಥಳದ ಮಲ್ಲಪ್ಪನು, ಸದರೀ ಬೀರೂರು ವಾಸಸ್ಥನಾಗಿ ಮೃತಪಟ್ಟ ಮಲ್ಲಿಕಾರ್ಜ್ಜುನಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಪ್ಪನ ಅರ್ಜಿಯನ್ನು 1885ನೇ ಇಸವಿ ಫಿಬ್ರುವರಿ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಿಕಾರ್ಜ್ಜುನಪ್ಪನ ಆಸ್ತಿಗೆ ಹಕ್ಕುದಾರರಾದ ವಿಷ್ಟ್ಯರೂ ಈ ಕೋರ್ಟ್ನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ॥ 1885ನೇ ಇಸವಿ ಜನವರಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 137.

ಮೃತಪಟ್ಟ ವೆಸವಾ ಮಂಜಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ತಿಪ್ಪಾರಿ ತಿಮ್ಮಯ್ಯ, ಮೃತಪಟ್ಟ ಸದರೀ ವಸವಾ ಮಂಜಪ್ಪನು ಬರದು ಯಿಟ್ಟ ಮರಣಶಾಸನದ ಮೇರಿಗೆ ಆತನ ಆಸ್ತಿಗೆ ಬಾಧ್ಯನೆಂಬ ಹಕ್ಕುದಾರಿ ಮೇಲೆ ನಗರ ತಾಲ್ಲೂಕು ಆರ್ನಾಡು ಮಾಗಣಿ ಕಿರಗುಳಕೆ ಸ್ಥಳದ ತಿಪ್ಪಾರಿ ತಿಮ್ಮಯ್ಯನು, ನಗರ ತಾಲ್ಲೂಕು ಆರ್ನಾಡು ಮಾಗಣಿ ಬಿಳದೊಣೆ ವಾಸಸ್ಥನಾಗಿ ಮೃತಪಟ್ಟ ವಸವಾ ಮಂಜಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ತಿಪ್ಪಾರಿ ತಿಮ್ಮಯ್ಯನ ಅರ್ಜೀಯನ್ನು 1885ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 17ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಸವಾ ಮಂಜಪ್ಪನ ಆಸ್ತಿಗೆ ಹಕ್ಕುದಾರರಾದ ವಿಷಿಷ್ಟರೂ ಈ ಕೋರ್ಟ್ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 138.

ಮೃತಪಟ್ಟ ಗುತ್ತದ ವೀರಪ್ಪ, ಮತ್ತು ಗುತ್ತದ ಪವಾಡಪ್ಪ ಇವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗುತ್ತದ ಬಸಪ್ಪ, ಮೃತಪಟ್ಟ ಸದರೀ ಗುತ್ತದ ವೀರಪ್ಪನಿಗೆ ಖಾಸಾಮಗನು ಮತ್ತು ಗುತ್ತದ ಪವಾಡಪ್ಪನಿಗೆ ಮುಮಗನು ಆಗದೇಕೆಂಬ ಪಕ್ಕುದಾರೀ ಮೇಲೆ ಕೊಪ್ಪ ತಾಲ್ಲೂಕು ದುಡೇಪಳ್ಳಿ ಸ್ಥಳದ ಗುತ್ತದ ಬಸಪ್ಪನು ಸದರೀ ದುಡೇಪಳ್ಳಿ ವಾಸಸ್ಥನಾಗಿ ಮೃತಪಟ್ಟ ಗುತ್ತದ ವೀರಪ್ಪ ಮತ್ತು ಗುತ್ತದ ಪವಾಡಪ್ಪ ಇವರ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ ಬ್ಯೆ ಕ್ ಕೋರ್ಟಿಗೆ ಖಾಯಿಷ್ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗುತ್ತದ ಬಸಪ್ಪನ ಅರ್ಜೀಪ್ರಮಾಣ 1885ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 17ರಲ್ಲು ಕೇಳಿ ಸರಪಟ್ಟಿಕೇಪ ಪಡಿಯತಕ್ಕ ಬಾಧ್ಯತೆಯು ವಿುರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುತ್ತದ ವೀರಪ್ಪ ಮತ್ತು ಗುತ್ತದ ಪವಾಡಪ್ಪ ಇವರ ಆಸ್ತಿಗೆ ಪಕ್ಕುದಾರರಾದ ವಿುಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಡಿಸಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ಕತ್ತಿನ್ಹೊಡನೆ ಕೊಡೋಣಾಗಿದೆ.

ತಾರೀಖು 31ನೇ ಡಿಸಂಬರ್ 1884.

ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗ ಮತ್ತು ಕಡೂರು ಡಿಸ್ಟ್ರಿಕ್ಟುಗಳಿಂದ ಕಮ್ಮಿಟಾದ ಕ್ರಿಮಿನಲ್ ಮೊಕದ್ದಮೆಗಳ ಡಯ್ಯಾಫ್ತ್ತೀ ಬಗ್ಯೆ ಕೆಲ್ಸಗಳು ಸ್ಯ 1885ನೇ ಇಸವಿಯಲ್ಲಿ ಇದರಂತೆ ಕಂಡ ತಾರೀಖುಗಳಲ್ಲಿ ಸದರೀ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರ್‌ಗಳೊಳಗೆ ನಡಿಸಲ್ಪಡುವವು:—

ಶಿವಮೊಗ್ಗ ಡಿಸ್ಟ್ರಿಕ್ಟು.		ಕಡೂರು ಡಿಸ್ಟ್ರಿಕ್ಟು.	
5ನೇ ಜನವರೀ	ಸೋಮವಾರ.	2ನೇ ಫಿಬ್ರವರೀ	ಸೋಮವಾರ.
2ನೇ ಮಾರ್ಚೀ	ಸೋಮವಾರ.	4ನೇ ಮೇ	ಸೋಮವಾರ.
8ನೇ ಏಪ್ರಿಲ್	ಬುಧವಾರ.	3ನೇ ಆಗಸ್ಟು	ಸೋಮವಾರ.
1ನೇ ಜೂನ್	ಸೋಮವಾರ.	2ನೇ ನವಂಬರ್	ಸೋಮವಾರ.
6ನೇ ಜುಲ್ಯೆ	ಸೋಮವಾರ,		
7ನೇ ಸೆಪ್ಟಂಬರ್	ಸೋಮವಾರ.		
5ನೇ ಅಕ್ಟೋಬರ್	ಸೋಮವಾರ.		
7ನೇ ಡಿಸಂಬರ್	ಸೋಮವಾರ.		

ಪ್ರಾಯ್ಟ್ಸ್ ಬಗ್ಯೆ ಹೊಕದ್ದಮೆಗಳನ್ನು ಕಮ್ಮಿಟ್ ಮಾಡಲು ಅಧಿಕಾರವೈಸ್ಡ ದರೋಬಸ್ತು ಮಾಜಿಸ್ಟ್ರೇಟುಗಳೂ, ತಾವು ಕಮ್ಮಿಟ್ ಮಾಡುವ ಮೊಕದ್ದಮೆಗಳಲ್ಲಿನ ಫಿರ್ಯಾದೀಗಳು ಮತ್ತು ಸಾಕ್ಷಿಗಳು ಅಯಾ ಡಿಸ್ಟ್ರಿಕ್ಟುಗಳ ಹೆಡ್‌ಕ್ವಾರ್ಟರುಗಳೊಳಗೆ ಮೇಲೆ ನಮೂದಿಸಲ್ಪಟ್ಟ ತಾರೀಖುಗಳಲ್ಲಿ ಬೆಳ್ಳಿ 11 ಘಂಟೆಗೆ ಈ ಕೋರ್ಟು ರೂಬರೂ ಹಾಜರಾಗುವಂತೆ ಅವರುಗಳಿಂದ ಮುಚ್ಚಲಿಕೆ ತಗದು ಕೊಳ್ಳತಕ್ಕ ಡ್ಡೆಂದು ಕೋರಲ್ಪಟ್ಟಿರುತ್ತಾರೆ.

ಟಿ. ನರಸರಿರಾವ್,
ಸೆಷನ್ಸ್ ಜಡ್ಜ್.

ತಾರೀಖು 6ನೇ ಡಿಸಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಸ್ಯ 1885ನೇ ಇಸವಿ ಫೆಬ್ರವರಿ ಗುರ್ಯೇ ತಾರೀಖು ಲಾಗಾಯಿತು ಜೂನ್ 30ನೇ ತಾರೀಖುವರೆಗೆ ಇದರಡಿ ಕಂಡ ಪ್ಲಾಂಟೇರ್ಷಗಳು ಬೇರೆಗೇ ಕಾಲಕ್ಕೂಸ್ತರ ಮುಚ್ಚಲ್ಪಡುತವೆ. ಬೇರೆಗಾದರು ಪ್ಲಾಂಟೇರ್ಷಗಳ ಚಾರ್ಜಿನಲ್ಲಿರುವ ಫಾರೆಸ್ಟ್ಸ್‌ಅಸಿಸ್ಟೆಂಟಿಸಿಯವರ ವಿಶೇಷ ಅಪ್ಪಣೆವಾಯಿ ಸದರೀ ಪ್ಲಾಂಟೇರ್ಷಗಳನ್ನು ಪ್ರವೇಶ ಮಾಡಲು ಅವಕಾಶ ಕೊಡಲ್ಪಡುವದಿಲ್ಲ

ಪ್ಲಾಂಟೇರ್ಷಗಳು.		ತಾಲ್ಲೂಕು.
ಕಾಡಗೋಡಿ		ಹೊನಕೋಟೆ
ಜಡಿಗೇನಕಳ್ಳಿ	(ಹಳೇದು ಮತ್ತು ಹೊಸದು)	ಡಿಟೋ
ನೆಲಾಲ	(A. B. ನ C.)	ಡಿಟೋ